ಆ) ಕಂದಾಯ ಇಲಾಖೆಯ ಅಧಿಕಾರಿಗಳು ಸರ್ಕಾರಿ ಕಾಲುವೆ ದಾರಿಗೆ ಖಾಸಗಿ ವ್ಯಕ್ತಿಗಳ ಜೊತೆ ಸೇರಿ ಬೇಲಿ ಹಾಕಲು ಶಾಮೀಲಾಗಿರುವುದಿಲ್ಲ. ಅದರ ಬದಲಾಗಿ ಅಧಿಕಾರಿಗಳು ಬೇಲಿ ತೆಗೆಯಲು ಕಾನೂನು ರೀತಿ ಕ್ರಮ ಕೈಗೊಂಡಿದ್ದಾರೆ ಹಾಗೂ ಯಾವ ವ್ಯಕ್ತಿಯ ವಿರುದ್ಧ ಎವಿಕ್ಷನ್ ನೋಟೀಸ್ ಜಾರಿ ಮಾಡಲಾಗಿತ್ತೊ ಆ ವ್ಯಕ್ತಿಯು ಚಾಮರಾಜನಗರದ ಮುನ್ಸೀಫ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.

ಇ) ಒತ್ತುವರಿದಾರರನ್ನು ಖುಲ್ಲಾಪಡಿಸಲು ಕ್ರಮಕೈಗೊಂಡಾಗ ಚಾಮರಾಜನಗರ ಮುನ್ಸೀಫ್ ನ್ಯಾಯಾಲಯವು ಈ ಆಸ್ತಿಗೆ ಹಸ್ತಕ್ಷೇಪ ಮಾಡಬಾರದಾಗಿ ನಿರ್ದೇಶನ ನೀಡಿರುತ್ತಾರೆ. ಏಕೆಂದರೆ ಶ್ರೀ ಸೈಯದ್ ಮುಕ್ತಾರ್ ಅಹಮದ್‌ರವರು ಆ ನ್ಯಾಯಾಲಯದಲ್ಲಿ ಅಸಲು ದಾವೆ (ಒ.ಎಸ್.) 251 / 90 ರಲ್ಲಿ ದಾವೆ ಹೂಡಿರುತ್ತಾರೆ.

ಈ) ಈ ವಿಷಯದಲ್ಲಿ ಸರ್ಕಾರಿ ಅಧಿಕಾರಿಗಳು ಶಾಮೀಲಾಗಿಲ್ಲದಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕ್ಯಾಪಿಟೇಶನ್ ಫೀ ತಪ್ಪಿಸಲು ಕ್ರಮ

1504 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸರ್ಕಾರಿ ಕ್ಯಾಪಿಟೇಶನ್ ಫೀ ನಿಗದಿ ಮಾಡಿದ್ದರೂ ಡೊನೇಷನ್ ಪಡೆಯುತ್ತಿರುವುದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತಾರೆ?

ಆ) ಸರ್ಕಾರ ನಿಗದಿಮಾಡಿರುವ ಕ್ಯಾಪಿಟೇಶನ್ ಫೀ ಅನ್ನು ಒಪ್ಪಿಕೊಂಡಿರುವುದರಿಂದ ಸರ್ಕಾರದವರೆ ನೇರವಾಗಿ ಎಲ್ಲಾ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಏಕೆ ಹಂಚಬಾರದು; ಈ ರೀತಿ ಹಂಚಿಕೆ ಮಾಡಲು ಸರ್ಕಾರಕ್ಕೆ ತೊಂದರೆ ಇದೆಯೇ?

ಇ) ಈ ರೀತಿ ಹಂಚಿಕೆಯನ್ನು ಮಾಡಲು ಸರ್ಕಾರಕ್ಕೆ ತೊಂದರೆ ಇದ್ದರೆ ಸರ್ಕಾರ ಏತಕ್ಕಾಗಿ ಕ್ಯಾಪಿಟೇಶನ್ ಫೀಯನ್ನು ನಿಗಧಿಮಾಡಿರುತ್ತದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಟ್ಯೂಷನ್ ಫೀ ಮತ್ತು ಇತರ ಫೀಯನ್ನು ಸರ್ಕಾರವು ನಿಗಧಿಪಡಿಸಿದೆ. ಖಾಸಗಿ ಕಾಲೇಜಿನವರು ಹೆಚ್ಚಿಗೆ ಹಣವನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿರುವ ಬಗ್ಗೆ ಸರ್ಕಾರಕ್ಕೆ ನಿರ್ದಿಷ್ಟವಾದ ದೂರುಗಳು ಯಾವುದೂ ಬಂದಿಲ್ಲ.

ಆ) ಮತ್ತು ಇ) ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ತುಂಬಬೇಕಾದ ಸೀಟುಗಳನ್ನು ಅರ್ಹತೆ ಆಧಾರದ ಮೇಲೆ ತುಂಬಲಾಗುತ್ತಿದೆ. ಆದರೆ ಆಡಳಿತ ವರ್ಗದವರ ಸೀಟುಗಳನ್ನು ತುಂಬಲು, ಅನುಸರಿಸಬೇಕಾದ ವಿಧಾನದ ಬಗ್ಗೆ ಸರ್ಕಾರವು ಯಾವುದೇ ಆದೇಶವನ್ನು ಹೊರಡಿಸಿಲ್ಲ. ಈ ಬಗ್ಗೆ ಆದೇಶವನ್ನು ಹೊರಡಿಸಲು ಸರ್ಕಾರವು ಪರಿಶೀಲಿಸುತ್ತಿದೆ.

ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಹರಿಜನ-ಗಿರಿಜನ ಮೀಸಲಾತಿ.

1503 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಮ್ಯಾನೇಜ್‌ಮೆಂಟ್ ಸೀಟಿನಲ್ಲಿ ಕಡೆಯ ಪಕ್ಷ ಹರಿಜನ ಗಿರಿಜನರಿಗೆ 18 ಸೀಟುಗಳನ್ನು ವಿದ್ಯಾರ್ಥಿಗಳಿಗೆ ಕೊಡುತ್ತಿರುವರೆ?